ಕತೆ



# ಬಾಕಿ ಸಂಗ್ತಿ ಮೊಕ್ತಾ

**ವಸುಮತಿ ಉಡುಪ**

ದೊಡ್ಡ ಸ್ಟೀಲ್ ಉಗ್ಗದ ತುಂಬಾ ಹಲಸಿನಹಣ್ಣಿನ ಮುಳುಕ ತುಂಬಿಸಿಕೊಟ್ಟಿದ್ದಳು ಸೀತೆ, ಅಣ್ಣನ ಅಪರೂಪದ ಮಗಳಿಗೆಂದು. ಹೆರೆತುಪ್ಪದ ಜೊತೆ ಬಿಸಿಬಿಸಿ ಮುಳುಕ ತಿನ್ನಲು ಸಿಗುವುದಾದರೆ ಮೂಗು ಕೊಯ್ಯಿಸಿಕೊಳ್ಳುತ್ತಾಳೆ ರಜನಿ. ರಾತ್ರಿ ಕಳೆದು ಬೆಳಗಾಗುವುದರಲ್ಲಿ ತಿನಿಸಿನ ಬಿಸಿ ಆರಿ ತಂಗಳಾದರೂ ರುಚಿ ಕೆಟ್ಟಿರುವುದಿಲ್ಲ. ರಜನಿ ನಾಲ್ಕು ದಿನ ಇಟ್ಟುಕೊಂಡು ಮನಃಪೂರ್ತಿ ತಿನ್ನಬಹುದು. ಉಗ್ಗದ ಮುಚ್ಚಳ ತೆಗೆದ ಮಗಳು ಕಣ್ಣರಳಿಸಿ,